ಸಂಜೆ ಮನೆಗೇ ಬಂದ. ಹೊರಗೆ ಅಡ್ಡಾಡಿ ಬರೋಣವೆಂದು ಹೊರಟೆ. ಅವನು ಹಿಂಬಾಲಿಸಿದ. ನಾನು ಹೇಳುವ ಮೊದಲು, ಅವನೇ ಕೇಳಿದ–

''ಶಶಿ ಜರ್ಮನಿಗೆ ಹೋಗೋದಕ್ಕೆ ನೀ ಆಯ್ಕೆ ಆಗಿದ್ದೀಯಂತೆ...'' ಮೊದಲ ಬಾರಿಗೆ ರವಿಯ ಸ್ವರದಲ್ಲಿ ಆತಂಕ ಗುರುತಿಸಿದೆ.

"ಹೂಂ..."

"ಈಗ ಮತ್ತೊಂದು ಡಿಗ್ರಿ ತೆಗೆದುಕೊಂಡು ಏನಾಗಬೇಕು ಶಶಿ...?" ತನ್ನ ಸಾಹಸಹೀನ ಬಾಳಿನ ತತ್ತ್ವವನ್ನೇ ನನಗೂ ಬೋಧಿಸುತ್ತಿದ್ದಾನೆ ಎನಿಸಿ ಹೇಳಿದೆ–

"ಹೆಚ್ಚಿನ ಪದವಿಗಳಿಂದ ತೊಂದರೆ ಏನೂ ಇಲ್ಲವಲ್ಲ..."

"ಅಲ್ಲ ನಮ್ಮ ಮದುವೆ. ಅದರಾಚೆ ನಾನು ಬರೋದು ಅಂದರೆ, ನನಗೆ ಆರು ತಿಂಗಳಿಗಿಂತ ಹೆಚ್ಚು ರಜೆ ಸಿಗೊಲ್ಲ..."

"ನೀನು ಬರೋ ಅವಶ್ಯಕತೆ ಇಲ್ಲ. ನಾನು ಓದೋಕ್ಕೆ ಹೋಗ್ತಾ ಇರೋದು..." ನಾನು ಅವನೆಲ್ಲ ಯೋಜನೆಗಳ ಮಟಕುಗೊಳಿಸಿ ಹೇಳಿದೆ. ಅವನು ಕ್ಷಣ ಹೊತ್ತು ಏನು ಹೇಳಲೂ ತೋರದೆ ನನ್ನ ಮುಖವನ್ನೇ ಗಲಿಬಿಲಿಗೊಂಡು ನೋಡಿದ, ತಡವರಿಸಿದ. ಇವನಿಗೆ ನನ್ನ ತಡೆದು ನಿಲ್ಲಿಸುವ ಧೈರ್ಯವೂ ಇಲ್ಲವೇ?

"ಶಶಿ, ನಿನಗೆ ಹೋಗಲೇಬೇಕೆಂದಿದ್ದರೆ ಮದುವೆ ಮುಗಿಸಿಕೊಂಡು ಹೋಗು..." ಮೆಲ್ಲನೆ ಹೇಳಿದ. ಸ್ವರದಲ್ಲಿ ಆತ್ಮವಿಶ್ವಾಸವೂ ಇರಲಿಲ್ಲ.

"ರವಿ, ನಾನು ನಮ್ಮ ಮದುವೆಯ ಬಗ್ಗೆ ಯೋಚಿಸಿಯೇ ಇಲ್ಲ..." ಎತ್ತಲೋ ನೋಡುತ್ತಾ ಉತ್ತರಿಸಿದೆ. ರವಿ ಈಗ ನನ್ನ ನೇರವಾಗಿ ನೋಡಿದ. ಮೊದಲ ಬಾರಿಗೆ ಅವನು ನನ್ನ ಕಣ್ಣಲ್ಲಿಯ ಭಾವಗಳ ಓದುವ ಪ್ರಯಾಸ ಮಾಡಿದ.

"ಹಾಗಂದರೆ ಶಶಿ...?" ಅಷ್ಟಕ್ಕೇ ನಿಲ್ಲಿಸಿದ.

"ನನ್ನ ಮದುವೆ ಬಗ್ಗೆ ನಾನು ನಿರ್ಧಾರವನ್ನು ಕೈಗೊಂಡಿಲ್ಲ. ಕಿಶೋರದ ಆಸೆ ಭಾಷೆಗಳಿಗೆ ಬದುಕ ತಗುಲಿಹಾಕುವ ಬಗ್ಗೆಯೇ ನನ್ನಲ್ಲಿ ಮೂಲಭೂತ ಪ್ರಶ್ನೆಗಳೆದ್ದಿವೆ."

ಈಗ ರವಿ ಪೂರ್ಣ ಬಿಳುಚಿಕೊಂಡ.

"ಏನು ಹೇಳ್ತಾ ಇದ್ದೀಯಾ ಶಶಿ?" ಬೆಚ್ಚಿ ಕೇಳಿದ.

ನಾನು ಹೇಳಿದೆ, ಬಹಳಷ್ಟು.

ಸಂಜೆ ಕಪ್ಪು ಕರಗಿ ಕೆಂಪಾದ ಮೇಲೂ, ಹೇಳುತ್ತಲೇ ಇದ್ದೆ–

"ರವಿ ನೀ ನಿಂತಲ್ಲೇ ನಿಂತೆ. ಮಡುವಾದೆ, ಕೆಸರಾದೆ.

ನಾ ಹರಿದು ಹೋದೆ ರಭಸವಾಗಿ ಭೋರ್ಗರೆದು.

ತೆರೆಯಾಗಿ, ತೊರೆಯಾಗಿ, ಝುರಿಯಾಗಿ– ಕ್ಷಣ ನಿಲ್ಲದ ಬದುಕಿನ ಗರಿಯಾಗಿ.

ನಾನು ಹೇಗೆ ಬಿಡಿಸಿ ಹೇಳಲಿ. ಇದಕ್ಕೂ ಸ್ಪಷ್ಟವಾಗಿ?"

ರವಿ ಮೌನವಾದ. ನಿಧಾನವಾಗಿ ಹೊರಡಲು ಮೇಲೆದ್ದೆ. ಆವರಿಸಿದ ಕತ್ತಲಲ್ಲಿ ಸದ್ದಿಲ್ಲದೆ ಹೆಜ್ಜೆ ಹಾಕಿದೆವು. ಮುಂದೆಂದೂ ಒಂದಾಗದ ಹೆಜ್ಜೆಗಳು ಕ್ಷಣ ಹೊತ್ತು ಜೊತೆಯಾಗಿ ನಡೆದವು– ವರ್ತಮಾನದ ತುದಿಯವರೆಗೆ.

ನಾಳಿನ ನಮ್ಮ ಭವಿಷ್ಯ ಬೇರೆಯಾಗಿ ಕಾದಿತ್ತು.

⌘